**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**
**ಆರ್.ಎ.ಸಂಖ್ಯೆಃ 25/2013 ಜೊತೆಗೆ 34/2013**

ದಿನಾಂಕಃ 26.10.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ವಾ.ಸಾ. - 1

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಸಂಖ್ಯೆ 3 ರಿಂದ 6 ರವರ ಪರ ಶ್ರೀ. ಎಸ್.ಎನ್ ವಕೀಲರಿಂದಃ**

ಮನೆ ಸಂಖ್ಯೆ 2218 ದಾವಾ ಸ್ವತ್ತು ಇರುತ್ತದೆ. ಅಸಲು ದಾವೆ 7/2005 ರ ದಿನಾಂಕ 12.12.2006 ರ ತೀರ್ಪನ್ನು ನಾನು ಉಲ್ಲಂಘನೆ ಮಾಡಿಲ್ಲ. ದಿನಾಂಕ 12.12.2006 ರ ನಂತರದಿಂದ ನಾನು ಮನೆ ಸಂಖ್ಯೆ 2218 ರಲ್ಲಿ ವಾಸ ಇರುವುದಿಲ್ಲ. ನಾನು 15 ವರ್ಷಗಳಿಂದ ಮನೆ ಸಂಖ್ಯೆ 2218 ರಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಿರುವುದು ಶುದ್ಧ ಸುಳ್ಳು ಎನ್ನುವುದು ಸರಿ ಇದೆ. ನಾನು ಮನೆ ಸಂಖ್ಯೆ 2218 ರಲ್ಲಿ 15 ವರ್ಷಗಳಿಂದ ಆಗಲಿ ಅಥವಾ ಯಾವುದೇ ಸಮಯದಲ್ಲಿ ಆಗಲಿ ವಾಸ ಇರಲೇ ಇಲ್ಲ ಎನ್ನುವುದು ಸರಿ ಅಲ್ಲ. ಶ್ರೀನಿವಾಸ್ ಮೂರ್ತಿ ಮತ್ತು ಅವರ ಕುಟುಂಬದವರು ಮತ್ತು ಯಶೋದಮ್ಮ ಮನೆ ಸಂಖ್ಯೆ 2218 ರ ಮುಂಭಾಗದಲ್ಲಿ ನಾನು ಖರೀದಿ ಮಾಡಿರುತ್ತೇನೆ ಎನ್ನುವ ಸಮಯಕ್ಕೆ ಮೊದಲಿನಿಂದಲೂ ವಾಸ ಇದ್ದರು ಎಂದರೆ ಕೇವಲ ಯಶೋಧಮ್ಮ ಮಾತ್ರ ವಾಸ ಇದ್ದರು. ಮೇಲೆ ಹೇಳಿದಂತೆ ವಾಸ ಇದ್ದ ಸ್ವತ್ತು ಅವರ ಕುಟುಂಬದ ವಾಸದ ಮನೆ ಆಗಿತ್ತು ಎನ್ನುವುದು ಸರಿ ಅಲ್ಲ.

ಯಶೋದಮ್ಮ ಮತ್ತು ಶ್ರೀನಿವಾಸ ಮೂರ್ತಿ ಭಾಗ ಮಾಡಿಕೊಂಡ ಕುರಿತು ಖಾತೆ ಪ್ರಮಾಣ ಪತ್ರ, ಹಿಂಬರಹ ಕೊಟ್ಟಿದ್ದೇನೆ. ಭಾಗ ಪತ್ರ ಮಾಡಿಕೊಂಡಿರುವುದಿಲ್ಲ. ಶ್ರೀನಿವಾಸ ಮೂರ್ತಿ ಮತ್ತು ಕುಟುಂಬದವರ ಸಹಿ ಮಾಡಿಸಿಕೊಡಿ ಎಂದು ನಾನು ಹೇಳಿರುವುದಿಲ್ಲ, ಅವರು ಕೂಡ ಅಲ್ಲಿ ಇರಲಿಲ್ಲ.

**ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದು ಮೂಂದೂಡಿರುತ್ತದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಯಶೋಧಮ್ಮನ ಹೆಸರಿನಲ್ಲಿಯೇ ಪತ್ರ ಇದ್ದಿದರಿಂದ ನಾನು ಅವರಿಗೆ ಶ್ರೀನಿವಾಸ್ ಮೂರ್ತಿ ಜೊತೆ ಭಾಗ ಕುರಿತು ಪತ್ರ ಮಾಡಿಕೊಂಡು ಕ್ರಯ ಮಾಡಿ ಎಂದು ಕೇಳಿರುವುದಿಲ್ಲ. ನಾನು ಖರೀದಿ ಮಾಡಿರುತ್ತೇನೆಂದು ಹೇಳುತ್ತಿರುವ ಸಮಯಕ್ಕೆ ಶ್ರೀನಿವಾಸ್ ಮೂರ್ತಿ ಕುಟುಂಬದವರು ದಾವಾ ಸ್ವತ್ತಿನಲ್ಲಿಯೇ ವಾಸ ಇದ್ದರು ಎನ್ನುವುದು ಸರಿ ಅಲ್ಲ. ಯಶೋಧಮ್ಮ ಮತ್ತು ಅವರ ಅಪ್ರಾಪ್ತ ವಯಸ್ಸಿನ ಮಗನ ಜೊತೆ ಖರೀದಿ ಮಾಡಿದ ಪತ್ರ ಇತ್ತು. ಯಶೋಧಮ್ಮ ಅಪ್ರಾಪ್ತ ವಯಸ್ಸಿನ

ಮಗನ ಜೊತೆ ಖರೀದಿ ಮಾಡಿದ್ದರಿಂದ ಪೂರ್ಣ ದಾವಾ ಸ್ವತ್ತಿನಲ್ಲಿ ಅರ್ಧ ಭಾಗ ಯಶೋಧಮ್ಮನಿಗೆ ಮತ್ತು ಇನ್ನು ಅರ್ಧ ಭಾಗ ಶ್ರೀನಿವಾಸ ಮೂರ್ತಿ ಕುಟುಂಬಕ್ಕೆ ಇರುತ್ತದೆ ಎನ್ನುವುದು ಸರಿ ಇದೆ.

ನಾನು ಖರೀದಿ ಮಾಡುತ್ತಿರುವ ಪತ್ರಿಕೆ ಯಲ್ಲಿ ಹಾಕಿಸಿರಲಿಲ್ಲ ಆದರೆ ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ತಿಳಿಸಿದ್ದೆ. ನಾನು ಕೆ.ಪಿ.ವೀರಪ್ಪ ಎನ್ನುವವರ ಮೂಲಕ ಒಬ್ಬರನ್ನು ನೇಮಕ ಮಾಡಿಸಿ ಸ್ವತ್ತಿನ ಬಳಿ ಡಂಗೂರ ಹೊಡೆಸಿದ್ದೆ. ಡಂಗೂರ ಹೊಡೆದವರ ಹೆಸರು ನನಗೆ ಹೇಳಲು ಆಗುವುದಿಲ್ಲ. ಈ ಮೊದಲು ವಾದ ಪತ್ರದಲ್ಲಿ, ನನ್ನ ಸಾಕ್ಷ್ಯದಲ್ಲಿ ಎಲ್ಲಿಯೂ ಡಂಗೂರ ಹೊಡೆಸಿದ್ದ ಬಗ್ಗೆ ನಾನು ಹೇಳಿಲ್ಲ. ಬ್ಯಾಂಕ್ ವಕೀಲರಿಗೆ ಗೊತ್ತು. ಬ್ಯಾಂಕ್ ವಕೀಲರು ಅವರ ಕಾನೂನು ಅಭಿಪ್ರಾಯದಲ್ಲಿ ಈ ಕುರಿತು ಹೇಳಿದ್ದಾರೆ ಅಥವಾ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಪತ್ರಿಕೆಯಲ್ಲಿ ಹಾಕುವ ಬಗ್ಗೆ ಭವಿಷ್ಯ ನಿಧಿ ಸಾಲ ಕೊಡುವವರು ಹೇಳದ ಕಾರಣ ನಾನು ಹಾಕಿಸಿಲ್ಲ.

ನಾನು ಸಾರ್ವಜನಿಕವಾಗಿ ತಿಳಿಸಿದ್ದ ಕಾರಣ ಪತ್ರಿಕೆಯಲ್ಲಿ ಹಾಕಿಸಲಿಲ್ಲ.ಸಾರ್ವಜನಿಕವಾಗಿ ತಿಳಿಸಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಸಾರ್ವಜನಿಕವಾಗಿ ಹೇಳಿರುತ್ತೇನೆ ಮತ್ತು ಡಂಗೂರ ಹೊಡೆಸಿರುತ್ತೇನೆ ಎಂದು ಶುದ್ದ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಈ ಕುರಿತು ಸಾಕ್ಷ್ಯ ನೀಡಲು ನನಗೆ ಸಾಧ್ಯ ಇಲ್ಲ. ನನಗೆ Bonafide Purchaser ಎಂದರೇ ಗೊತ್ತಿಲ್ಲ. ನಾನು ದಾವಾ ಆಸ್ತಿ ಕುರಿತು ವಿಚಾರಣೆ ಮಾಡಿ ಖರೀದಿ ಮಾಡಿರುತ್ತೇನೆ. ನಾನು ಯಾವುದೇ ರೀತಿ ವಿಚಾರಣೆ ಮಾಡಿಲ್ಲ, ಯಾವುದೇ ಕಾನೂನು ಅಭಿಪ್ರಾಯ ಪಡೆದಿಲ್ಲ ಮತ್ತು ನಾನು ಸದ್ಭಾವನೆ ಖರೀದಿದಾರ ಅಲ್ಲ ಎನ್ನುವುದು ಸರಿ ಅಲ್ಲ. ನಾನು ನನ್ನ ಮುಖ್ಯ ವಿಚಾರಣೆ

ಶಪಥ ಪತ್ರದ ವಾಕ್ಯ ವೃಂದ 4 ರಲ್ಲಿ ದಾವಾ ಅನುಸೂಚಿ ಎ ಸ್ವತ್ತು ಒಟ್ಟು ಕುಟುಂಬದ ಭಾಗ ಆಗದ ಸ್ವತ್ತು ಎಂದು ಯಶೋಧಮ್ಮ ಆಕೆಯ ಅಪ್ರಾಪ್ತ ಮಗನ ಜೊತೆ ಖರೀದಿ ಮಾಡಿರುವ ಕಾರಣ ಹೇಳಿರುತ್ತೇನೆ. ಯಶೋಧಮ್ಮ ಅಪ್ರಾಪ್ತ ಮಗನ ಜೊತೆ ಕೊಂಡಿರುವ ಆಸ್ತಿಯ ಅರ್ಧ ಭಾಗಕ್ಕೆ ಶ್ರೀನಿವಾಸ ಮೂರ್ತಿ ಕುಟುಂಬದವರು ಹಕ್ಕು ಹೊಂದಿರುತ್ತಾರೆ ಎನ್ನುವುದು ಸರಿ ಇದೆ.

ನಾನು ನನ್ನ ಮುಖ್ಯ ವಿಚಾರಣೆ ಶಪಥ ಪತ್ರದ ವಾಕ್ಯ ವೃಂದ 5 ರಲ್ಲಿ ಅಸಲು ದಾವೆ 492/2007 ಎಂದು ಬರೆಸಿದ್ದು ಆದರೆ ಸದರಿ ದಾವೆ ಸಂಖ್ಯೆ 491/2007 ಇರುತ್ತದೆ. ಸದರಿ ದಾವೆಯಲ್ಲಿ ನಾನು ಕೂಡ ಪಕ್ಷಕಾರ ಇರುತ್ತೇನೆ. ನಾನು ಖರೀದಿ ಮಾಡಿದಾಗ ಮನೆ ಮತ್ತು ಖಾಲಿ ನಿವೇಶನ ಎರಡು ಇತ್ತು. ಒಟ್ಟು ಜಾಗ 45 X 36 ಅಡಿ ಇದ್ದು ಅದರಲ್ಲಿ 27 ½ X 28 ½ ದ್ವಜ ಆಯದ ಮನೆ ಇತ್ತು. ಸದರಿ ದಾವೆಯಲ್ಲಿ ತೀರ್ಪು ಆಗಿರುತ್ತದೆ. ಸದರಿ ತೀರ್ಪುನ್ನು ನಾನು ಒಪ್ಪಿಕೊಂಡು ಪ್ರಶ್ನೆ ಮಾಡಿಲ್ಲ. ಸದರಿ ತೀರ್ಪಿನಲ್ಲಿ ಯಶೋಧಮ್ಮ ಮತ್ತು ಶ್ರೀ ನಿವಾಸ್ ಮೂರ್ತಿ ನಡುವೆ ಭಾಗ ಆಗಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತದೆ ಎನ್ನುವುದು ಸರಿ ಅಲ್ಲ. ಸದರಿ ತೀರ್ಪಿನಲ್ಲಿ ಯಶೋಧಮ್ಮ ಮತ್ತು ಶ್ರೀ ನಿವಾಸ್ ಮೂರ್ತಿ ನಡುವೆ ಭಾಗ ಆಗಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತದೆ ನಾನು ತಿಳಿದು ಸದರಿ ತೀರ್ಪನ್ನು ಒಪ್ಪಿ ಪ್ರಶ್ನೆ ಮಾಡಿಲ್ಲ ಎನ್ನುವುದು ಸರಿ ಅಲ್ಲ.

**ಮುಂದುವರೆದ ಪಾಟೀ ಸವಾಲು : ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.